# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
# ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆ:** 5033/2019 ಫ್ರಾಸಾ-58
ಚಾಸಾ-71

ದಿನಾಂಕಃ 09-07-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ಚನ್ನಮಲ್ಲಿಕಾರ್ಜುನ |
| **ತಂದೆಯ / ಗಂಡನ ಹೆಸರು** | ಚನ್ನಮಲ್ಲಪ್ಪ |
| **ವಯಸ್ಸು** | 52 |
| **ಉದ್ಯೋಗ** | ಹೆಚ್.ಸಿ, ಕೊರಟಗೆರೆ ಠಾಣೆ |
| **ವಾಸಸ್ಥಳ** | ಕೊರಟಗೆರೆ |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-**

ನಾನು ದಿ.08.02.2018 ರಿಂದ ಇಲ್ಲಿಯವರೆಗೂ ಕೊರಟಗೆರೆ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಈ ಪ್ರಕರಣಕ್ಕೆ ಸಂಬಂದಿಸಿದಂತೆ ದಿನಾಂಕಃ 16-1-2019 ರಂದು ತನಿಖಾಧಿಕಾರಿಗಳಾದ ಚಾಸಾಃ 75 ರವರ ಜೊತೆ ನಾನು ಮತ್ತು ಸಿಬ್ಬಂದಿಗಳು ಆರೋಪಿಗಳ ಪತ್ತೆಗಾಗಿ ದಾಬಸ್ ಪೇಟೆ ಬಳಿ ಹೋಗಿದ್ದೇವೆ. ಅಲ್ಲಿ ಎರಡು ಕಾರುಗಳು ನಿಂತಿದ್ದವು. ಚಾಸಾಃ 75 ರವರು ನಮಗೆ ಆದೇಶ ನೀಡಿ ಆ ಕಾರಗಳನ್ನು ಸುತ್ತುವರಿದು ಕಾರಿನಲ್ಲಿರುವವನ್ನು ವಶಕ್ಕೆ ಪಡೆಯಲು ಸೂಚನೆ ನೀಡಿದರು. ನಾವು ಅದರಂತೆ ಕಾರುಗಳನ್ನು ಸುತ್ತುವರಿದು ಅದರ ಹೊರಗೆ ನಿಂತು ಮಾತನಾಡುತ್ತಿದ್ದ 6 ಜನರನ್ನು ಹಿಡಿದುಕೊಂಡೆವು. ಅಲ್ಲಿ ಚಾಸಃ 75 ರವರು ಆ 6 ಜನರ ಹೆಸರನ್ನು ಕೇಳಿದರು. ಅವರು ತಮ್ಮ ಹೆಸರು ಧರ್ಮೇಂದ್ರ, ತಿಮ್ಮರಾಜು, ಜಗದೀಶಯ್ಯ, ಶಿವಕುಮಾರ, ಕೆಂಪಹನುಮಯ್ಯ, ಶ್ರೀನಿವಾಸ ಎಂದು ಹೇಳಿದರು. ಬಳಿಕ ಅವರನ್ನು ಕರೆದುಕೊಂಡು ಕೊರಟಗೆರೆಯ ವೃತ್ತ ನಿರೀಕ್ಷಕರ ಕಚೇರಿಗೆ ಬಂದೆವು.

ಅದೇ ದಿನ ಸಂಜೆ 6 ಗಂಟೆಗೆ ಕೊರಟಗೆರೆ ಠಾಣಾ ಪಿಎಸ್ಐ ಚಾಸಾಃ 74 ರವರ ಜೊತೆ ನಾನು ಮತ್ತು ಸಿಬ್ಬಂದಿ ಆರೋಪಿಗಳ ಪತ್ತೆಗಾಗಿ ಹೋಗಿದ್ದೆವು. ಆ ದಿನ ರಾತ್ರಿ ತುಮಕೂರಿಗೆ ಹೋದೆವು. ನಂತರ ಬೆಳಿಗ್ಗೆ 7 ಗಂಟೆ ಸಮಯದಲ್ಲಿ ಕೆಸರುಮಡುವಿನ ಅಣ್ಣಯ್ಯನ ಪಾಳ್ಯದಲ್ಲಿ ಉಳಿದ ಆರೋಪಿಗಳು ಇರುವ ಬಗ್ಗೆ ಮಾಹಿತಿ ಬಂತು. ನಾವು ಅಲ್ಲಿಗೆ ಹೋದೆವು. ಅಲ್ಲಿ ಆರೋಪಿ ಧರ್ಮೇಂದ್ರ ರವರ ತೋಟದ ಮನೆಯಲ್ಲಿ ಇದ್ದ 6 ಜನರನ್ನು ವಶಕ್ಕೆ ಪಡೆದೆವು. ಅವರನ್ನು ವಿಚಾರಿಸಿದಾಗ ಅವರು ತಮ್ಮ ಹೆಸರು ಬಸವರಾಜು, ಮಂಜುನಾಥ, ಕುಮಾರ, ಲೋಕೇಶ, ಪುರುಷೋತ್ತಮ, ಚಂದ್ರಶೇಖರ ಎಂದು ಹೇಳಿದರು. ನಂತರ ಅವರನ್ನು ಅಲ್ಲಿಂದ ಕರೆದುಕೊಂಡು ಬೆಳಿಗ್ಗೆ 8 ಗಂಟೆಗೆ ಕೊರಟಗೆರೆ ವೃತ್ತ ನಿರೀಕ್ಷಕರ ಕಚೇರಿಗೆ ಬಂದೆವು. ಈ ಬಗ್ಗೆ ಚಾಸಾಃ 74 ರವರು ಚಾಸಾಃ 75 ರವರಿಗೆ ವರದಿ ನೀಡಿದ್ದಾರೆ.

ನಾವು ವಶಕ್ಕೆ ಪಡೆದ 12 ಜನ ಅರೋಪಿಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಈ ದಿನ ನ್ಯಾಯಾಲಯದ ಮುಂದೆ ಹಾಜರಿರುವ 6, 9 ರಿಂದ 12 ಆರೋಪಿಗಳನ್ನು ಹಾಗೂ ವಿಸಿ ಮೂಲಕ ಹಾಜರುಪಡಿಸಿರುವ 3 ನೇ ಅರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿಗಳ ಪರಃ ಶ್ರೀ.ಟಿ.ಎಸ್.ಕೆ ವಕೀಲರಿಂದ**

ಕ್ರಷರ್ ಬಳಿಗೆ ನಾವು ಎರಡು ಜೀಪುಗಳಲ್ಲಿ ಹೋಗಿದ್ದೆವು. ಜೀಪುಗಳಲ್ಲಿ ಒಟ್ಟು ಎಷ್ಟು ಜನ ಇದ್ದೆವು ನೆನಪಿಲ್ಲ ಯಾವ ಜೀಪಿನಲ್ಲಿ ಅರೋಪಿಗಳು ಕುಳಿತಿದ್ದರು ನೆನಪಿಲ್ಲ. ನಾನೂ ಕೂಡ ಅರೋಪಿಗಳ ಬೆಂಗಾವಲಿಗೆ ಇದ್ದೆ. ನನ್ನನ್ನು ಬಿಟ್ಟು ಇತರೆ 3-4 ಜನ ಬೆಂಗಾವಲಿಗೆ ಇದ್ದರು ಆದರೆ ನಿಖರವಾಗಿ ಗೊತ್ತಿಲ್ಲ. ಕೊರಟಗೆರೆ ವೃತ್ತ ನಿರೀಕ್ಷಕರ ಕಚೇರಿಯಿಂದ ಹೊರಟಿದ್ದೆವು. ಸಾಕ್ಷಿಗಳನ್ನು ಜೊತೆಗೆ ಕರೆದುಕೊಂಡು ಹೋಗಿದ್ದೆವು. ಅವರು ಸರ್ಕಾರಿ ನೌಕರರಾಗಿದ್ದು ಒಬ್ಬರ ಹೆಸರು ನಕುಲ್ ಇನ್ನೊಬ್ಬರ ಹೆಸರು ನೆನಪಿಲ್ಲ. ಠಾಣೆಯಿಂದ 2 ಗಂಟೆಗೆ ಹೋಗಿದ್ದೇವೆ. ಲಾಗ್ ಬುಕ್ಕನ್ನು ಚಾಲಕ ಬರೆಯುತ್ತಾರೆ ನಾವು ಅಲ್ಲ. ಎರಡೂ ಜೀಪಗಳು ಸರ್ಕಾರಿ ಜೀಪುಗಳು. ಆರೋಪಿಗಳನ್ನು ಎಲ್ಲಿಂದ ಕರೆದುಕೊಂಡು ಬಂದರು ನೆನಪಿಲ್ಲ. ಅವರನ್ನು ಎಲ್ಲಿ ಇಟ್ಟಿದ್ದರು ನೆನಪಿಲ್ಲ. ಠಾಣೆಗೆ ಎಷ್ಟು ಹೊತ್ತಿಗೆ ಕರೆದುಕೊಂಡು ಬಂದರು ನೆನಪಿಲ್ಲ. ಆ ಸ್ಥಳಕ್ಕೆ ಹೋಗುವ ಮೊದಲು ನಾನು ಕಚೇರಿಯಲ್ಲಿ ಇದ್ದೆ. ನನ್ನನ್ನು

ಬೆಂಗಾವಲಿಗೆ ಕರೆದುಕೊಂಡು ಹೋಗಿದ್ದರು ನಾನು ಸಾಕ್ಷಿಯಾಗಿ ಹೋಗಿಲ್ಲ. ನಾವು ಆರೋಪಿಗಳ ಬೆಂಗಾವಲಿಗೆ ಇರುವಾಗ ಅವರ ಸುರಕ್ಷತೆ ಬಗ್ಗೆ ಮಾತ್ರ ಗಮನ ಹರಿಸುತ್ತೇವೆ ಬೇರೆ ಕಡೆ ಗಮನ ಹರಿಸುವುದಿಲ್ಲ ಎಂದರೆ ಪ್ರತಿಯೊಂದನ್ನೂ ನೋಡುತ್ತೇವೆ ಎಂದು ನುಡಿಯುತ್ತಾರೆ.

ನಾನು ಚಾಸಾಃ 75 ರವರ ಅಧೀನ ಅಧಿಕಾರಿಯಾದ ಕಾರಣ ತೊಂದರೆಯಾಗುತ್ತದೆ ಎಂದು ಮಹಜರ್ ಗೆ ಪೂರಕವಾಗಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**Sd/-**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**